ಕೊಂಡಿದ್ದರು. ಈ ಸಲ ಅನಿರೀಕ್ಷಿತವಾಗಿ ಈ ಘಟನೆ ನಡೆಯಿತು. ಜಿಲ್ಲಾಧಿಕಾರಿಯವರು ಈ ಬಗ್ಗೆ ಶ್ರದ್ಧೆವಹಿಸಿ ಒಂದು ತೀರ್ಮಾನಕ್ಕೆ ಬರುವ ವಿಷಯದಲ್ಲಿ ಕುತೂಹಲ ತೋರಿಸುತ್ತಿದ್ದಾರೆ.

ಶ್ರೀ ಎಚ್. ಎನ್. ನಂಜೇಗೌಡ.—ಮೊದಲನೆಯ ದಿನ ಗಲಾಟೆ ನಡೆದ ಮೇಲೆ ಮುಸಲ್ಮಾನ ನಿಷಾಸಿಗಳು ತಂತಿಯನ್ನು ಕಳುಹಿಸಿ, ಎರಡನೆಯ ದಿನ ಮತ್ತೆ ಗಲಾಟೆ ಮಾಡುವ ಬಗ್ಗೆ ಪಾಕಿಸ್ತಾನ ದವರಂತೆ ವರ್ತಿಸುತ್ತಿದ್ದರೆಂದು ನನ್ನ ಗಮನಕ್ಕೆ ಬಂದಿದೆ, ಅದು ಸರಿಯೇ ?

ಶ್ರೀ ಆರ್. ಎಂ. ಪಾಟೀಲ್.—ಮಾನ್ಯ ಸದಸ್ಯರ ಗಮನಕ್ಕೆ ಬಂದಿರಬಹುದು, ಆದರೆ ನಮಗೆ ಗೊತ್ತಿಲ್ಲ.

1-30 P.M.

Sri ABDUL KHUDUS ANWAR.—Will the Government think of making a legislation to remove all the compounds of the burial grounds of muslims for our friends to walk on the dead-bodies of the muslims ?

Sri R. M. PATIL.—There will be an amicable settlement. It is hoped so. For that purpose, leaders of both communities are making efforts and I think it is not necessary that this matter may be pursued further in the interest of the peace of the area.

ಶ್ರೀ ಎಚ್. ಬಿ. ಜ್ವಾಲನಯ್ಯ.—ಈ ಗಲಾಟೆಗೆ ಒಂದು ಪರಿಹಾರವೇನೆಂದರೆ, ಆ ಗಲಾಟೆಯ ಸ್ಥಳದಲ್ಲಿ ಒಂದು ನೀರು ಹೋಗುವ ಹಳ್ಳ ಇರುತ್ತದೆ. ಅದಕ್ಕೆ ಒಂದು ಹೈಲೆವಲ್ ಕಾಸ್‌ವೆ ಅಥವಾ ಒಂದು ಸೇತುವೆಯನ್ನು ಕಟ್ಟಿದರೆ, ಅದರ ವಿಚಾರಾಂತರ ಈ ಗೊಂದಲವು ಸಮಸ್ಯೆ ಪರಿಹಾರವಾಗು ವಂತಹ ರೀತಿ ಇದೆಯೆಂದು ಅಲ್ಲಿನ ಹಿಂದು ಮುಖಂಡರು ಅಭಿಪ್ರಾಯಪಟ್ಟಿದ್ದಾರೆ. ಆದ್ದರಿಂದ ಸರ್ಕಾರವು ಈ ಸೇತುವೆಯನ್ನು ಕಟ್ಟಿಸಿ ಈ ವ್ಯಾಜ್ಯವನ್ನು ಪರಿಹಾರ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

Sri R. M. PATIL.—It is a suggestion for consideration, Sir.

Sri B. P. KADAM.—I rise to a point of order, Sir. The Hon'ble Member said that there should be legislation to allow Hon'ble Members to walk over the dead bodies. It is a question of privilege.

Mr. DEPUTY SPEAKER.—If the member wants he may send it in the shape of a privilege motion.

ಶ್ರೀ ಎಚ್. ಎನ್. ನಂಜೇಗೌಡ.—ಅಲ್ಲಿ ಒಂದು ನಾಡಬಾಂಬು ಸಿಡಿಯಿತು, ಹಾಗೂ ಕೆಲವು ಹರಿತವಾದ ಅಲಗುಗಳ ಆಯುಧಗಳನ್ನು ವಶಪಡಿಸಿಕೊಳ್ಳಲಾಯಿತು ಎಂದು ಹೇಳಿದ್ದೀರಿ. ಆದ್ದರಿಂದ ಆ ನಾಡಬಾಂಬು ಎಲ್ಲಿ ತಯಾರಾಯಿತು, ಅದಕ್ಕೆ ಲೈಸೆನ್ಸ್ ಕೊಟ್ಟಿದ್ದೀರಾ, ಮತ್ತು ಹರಿತವಾದ ಆಯುಧಗಳಿಗೆ ಲೈಸೆನ್ಸ್ ಕೊಟ್ಟಿದ್ದೀರಾ? ಇದನ್ನು ಸ್ವಲ್ಪ ಬಹಿರಂಗ ಮಾಡುವುದಕ್ಕಾಗುತ್ತದೆಯೇ?

ಶ್ರೀ ಆರ್. ಎಂ. ಪಾಟೀಲ್.—ಇವೆಲ್ಲಾ ವಿಚಾರಣೆಯೊಳಗೆ ಬರುತ್ತವೆ. ಇದರೊಳಗೆ ನಾನು ಏವರಗಳನ್ನು ಕೊಡುವುದಕ್ಕಾಗುವುದಿಲ್ಲ. ಅದು ಗೊತ್ತೂ ಇಲ್ಲ.

(Sri V. N. Patil and Sri S. S. Shettar stood up for putting supplementaries)

Mr. DEPUTY SPEAKER.—Next question.

Failure of Crops due to Seasonal Conditions

232.—Sri H. C. LINGA REDDY (Malur).—

Will the Minister for Revenue and Forests be pleased to state :—

(*a*) whether crops have failed owing to present seasonal conditions ;

(SRI H. C. LINGA REDDY)

(*b*) if so, the steps taken to give relief to the people as regards (i) food supply (ii) starting relief works to enable the people to have purchasing capacity ?

A.—Sri B. RACHAIAH (Minister for Revenue and Forests).—

(*a*) Yes, in certain areas of the State.

(*b*) (i) Deputy Commissioners issue foodgrains from the district allotment to the people in the areas where crops have failed ;

(ii) Scarcity relief works have already been started wherever necessary in all the scarcity affected areas.

Sri H. C. LINGA REDDY.—May I know what is the amount so far granted by Government districtwise and the amount so far spent in each of the districts ?

ಶ್ರೀ ಬಿ. ರಾಚಯ್ಯ.—ಇದು ಒಂದು ದೊಡ್ಡ ಪಟ್ಟಿ ಇದೆ. ಎರಡು ಸಾರಿ ಹಣ ಒದಗಿಸಿದೆ. ಮೊದಲನೇ ಸಲ 35 ಲಕ್ಷ ಹಂಚಿದ್ದೇವೆ. ಎರಡನೇ ಸಾರಿ 55 ಲಕ್ಷ ರೂಪಾಯಿ ಕೊಟ್ಟಿದ್ದೇವೆ. ಈ ಪಟ್ಟಿ ಸೈಕ್ಲೋಸ್ಟೈಲ್ ಮಾಡಿಸಿ ಕೊಡುತ್ತೇನೆ.

Sri H. C. LINGA REDDY.--Have the State Government approached the Central Government for scarcity relief; if so, what is the response of the Central Government and what is the amount that the Central Government has been pleased to give ?

ಶ್ರೀ ಬಿ. ರಾಚಯ್ಯ.— ಕೇಂದ್ರ ಸರಕಾರಕ್ಕೆ ಬರೆದುಕೊಂಡಿದ್ದೇವೆ. ಅವರು ಅಧಿಕಾರಿಗಳ ಒಂದು ತಂಡವನ್ನು ಕಳಿಸಿಕೊಡುತ್ತಾರೆ. 10 ಕೋಟಿ ಕೊಡಬೇಕು ಮತ್ತು ಆರು ತಿಂಗಳು ಕೆಲಸ ಕಾರ್ಯಗಳನ್ನು ನಡೆಸಬೇಕು ಎಂದು ಇದೆ.

ಶ್ರೀ ಎಂ. ಎಂ. ಜೆ. ಸದ್ಯೋಜಾತಪ್ಪ.—ಯಾವ ಯಾವ ಡಿವಿಜನ್ನಿಗೆ ಎಷ್ಟೆಷ್ಟು ಹಣ ಹಂಚಿದ್ದೀರಿ?

ಶ್ರೀ ಬಿ. ರಾಚಯ್ಯ.—	1ನೇ ಸಲ	2ನೇ ಸಲ
ಬೆಂಗಳೂರು ಡಿವಿಜನ್	5,90,000	19 ಲಕ್ಷ ರೂ.
ಮೈಸೂರು ಡಿವಿಜನ್	7,77,150	17 ಲಕ್ಷ ರೂ.
ಬೆಳಗಾಂ ಡಿವಿಜನ್	10,40,000	11 ಲಕ್ಷ ರೂ.
ಗುಲಬರ್ಗ ಡಿವಿಜನ್	2,28,250	3 ಲಕ್ಷ ರೂ.

ಶ್ರೀ ಇ. ನಾರಾಯಣಗೌಡ.—ತೊಂದರೆಯಾದ ಜಿಲ್ಲೆಯಲ್ಲಿ ಕಂದಾಯ ವಸೂಲಿ ಸಾಲ ವಸೂಲಿ ಬಗ್ಗೆ ತೀರ್ಮಾನ ಕೈಗೊಂಡಿದ್ದೀರಾ ? ಜಿಲ್ಲಾಧಿಕಾರಿಗಳಿಗೆ ವಸೂಲಿ ನಿಲ್ಲಿಸಬೇಕು ಎಂದು ಸಲಹೆ ಕೊಟ್ಟಿದ್ದೀರಿ ?

ಶ್ರೀ ಬಿ. ರಾಚಯ್ಯ.—ಮೊನ್ನೆ ದಿನ ಬಹು ದೀರ್ಘವಾಗಿ ಉತ್ತರ ಹೇಳಿಬಿಟ್ಟೇನೆ. ಜಿಲ್ಲಾಧಿಕಾರಿಗಳಿಗೆ ಆದೇಶ ಕಳಿಸಿ, ಎಲ್ಲೆಲ್ಲಿ ನಾಲ್ಕು ಆಣೆಗಿಂತ ಕಡಿಮೆ ಬೆಳೆ ಇದ್ದರೆ ಅದಕ್ಕೆ ಎಂಥ ರಿಯಾಯಿತಿ ಕೊಡಬಹುದು, ಕಂದಾಯ ಮುಂದೂಡುವುದಕ್ಕೆ ಅವಕಾಶ ಇರುವುದು ತಿಳಿಸಿದ್ದೇವೆ.

ಶ್ರೀ ಇ. ನಾರಾಯಣಗೌಡ.—ನಾನು ಕೋಲಾರ ಜಿಲ್ಲೆಯವನು. ಕೋಲಾರ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳು ಕಟ್ಟುನಿಟ್ಟಾಗಿ ಕಂದಾಯ ವಸೂಲಾಮಾಡುತ್ತಿದ್ದಾರೆ. ಇದು ಅಭಾವ ಪ್ರದೇಶ ಎಂದು ಹೃಕಟಿಸಿದ್ದೀರಿ. ಆದರೂ ಕೂಡ ಜಿಲ್ಲಾಧಿಕಾರಿಗಳ ವಿವೇಚನೆಗೆ ಬಿಟ್ಟಿರುವುದರಿಂದ ಅವರು ವಸೂಲಾಮಾಡುತ್ತಿದ್ದಾರೆ. ಆದುದರಿಂದ ಅವರಿಗೆ ಆದೇಶ ಕೊಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಕೊಟ್ಟಿದ್ದೇವೆ ಎಂದು ಹೇಳಿದ್ದೇನೆ. ನಾಲ್ಕು ಆಣೆಗಿಂತ ಕಡಿಮೆ ಬೆಳೆ ಇರುವಂಥಾದಕ್ಕೆ ಕಂದಾಯ ವಸೂಲ್ಮಾಡಕೂಡದು, ರೆಮಿಷನ್ ಕೊಡಬೇಕು. 25 ರಿಂದ 37 ಪರ್ಸೆಂಟ್ ಇದ್ದರೆ ಮುಂದೂಡಬೇಕು, 37 ರಿಂದ 50 ಪರ್ಸೆಂಟ್‌ವರೆಗೆ ಬೆಳೆ ಇರುವ ಕಡೆ ಅರ್ಧ ರೆಮಿಷನ್ ಕೊಡಬೇಕು ಎಂದು ಆದೇಶ ಕಳಿಸಿದ್ದೇವೆ.

ಶ್ರೀ ಪಿ. ವೆಂಕಟಗಿರಿಯಪ್ಪ —ನಮ್ಮ ಜಿಲ್ಲೆಯಲ್ಲಿ ಸ್ಥಿತಿ ಹೇಗೆ ಇದೆ ಅಂದರೆ, ದೇವರು ವರ ಕೊಟ್ಟರೂ ಪೂಜಾರಿ ವರ ಕೊಡುವುದಿಲ್ಲ ಎನ್ನುವ ಹಾಗೆ ಆಗಿದೆ. ಸರಕಾರ ತೀರ್ಮಾನ ತೆಗೆದು ಕೊಂಡಿದ್ದಾರೆ. ಆದರೆ ಜಿಲ್ಲಾಧಿಕಾರಿಗಳು ಮಾತ್ರ ಮೇಲಿನವರ ಶಹಬಾಶಗಿರಿ ತೆಗೆದುಕೊಳ್ಳುವು ದಕ್ಕೋ ಏನೋ ರೆವಿನ್ಯೂ ಕಲೆಕ್ಷನ್ ಮಾಡುವುದನ್ನು ನಿಲ್ಲಿಸಿಲ್ಲ. ಇದರಿಂದ ಜನರಿಗೆ ಬಹಳ ತೊಂದರೆ ಯಾಗಿದೆ. ಆದುದರಿಂದ ಸರಕಾರ ಕೂಡಲೇ ಜಿಲ್ಲಾಧಿಕಾರಿಗಳಿಗೆ ಸರಕಾರದ ತೀರ್ಮಾನ ಜಾರಿಗೆ ತರುವುದಕ್ಕೆ ಆದೇಶ ಕೊಡುತ್ತೀರಾ, ಸ್ವಾಮಿ ?

ಶ್ರೀ ಬಿ. ರಾಚಯ್ಯ.—1—2—1966ರಂದು ಹೊರಡಿಸಿರುವ ನೋಟಿಫಿಕೇಷನ್‌ನಲ್ಲಿ ಎಲ್ಲ ಜಿಲ್ಲಾಧಿಕಾರಿಗಳಿಗೂ ಕೂಡ ಆದೇಶವನ್ನು ಕಳುಹಿಸಿಕೊಟ್ಟಿದ್ದೇವೆ. ಎಲ್ಲೆಲ್ಲಿ ಏನೂ ಇಲ್ಲದಹಾಗೆ ಬೆಳೆಯಾಗಿಲ್ಲ ಅಂಥ ಕಡೆ ಮಾತ್ರ ಆ ರೀತಿ ತೀರ್ಮಾನ ತೆಗೆದುಕೆ ಳ್ಳತಕ್ಕುದ್ದು, ಮತ್ತು ಬೆಳೆ ಆಗಿರುವ ಕಡೆ ವಸೂಲು ಮಾಡಬೇಕೆಂದು ತಿಳಿಸಿದ್ದೇವೆ.

ಶ್ರೀ ಸಿ. ಆರ್. ರಂಗೇಗೌಡ. —ರಾಜ್ಯದ ಕೆಲವು ಪ್ರದೇಶಗಳಲ್ಲಿ ಹವಾಮಾನ ಪರಿಸ್ಥಿತಿಯಿಂದ ಬೆಳೆಯ ನಷ್ಟವಾಗಿದೆ ಎಂದು ಹೇಳಿದ್ದಾರೆ. ರಾಂಡ್ ರೆವೆನ್ಯೂ ರೂಲ್ಸ್ ಪ್ರಕಾರ ಸೇಕ ದಾರರು, ತಹಸೀಲ್ದಾರರು, ಅಸಿಸ್ಟೆಂಟ್ ಕಮಿಷನರು ಅಂಥ ಗ್ರಾಮಗಳಲ್ಲಿ ಕ್ರಾಪ್ ಕಟಿಂಗ್ ಎಕ್ಸ್‌ಪರಿಮೆಂಟ್ ಮಾಡಬೇಕೆಂದು ಇದೆ. ಆದರಂತೆ ಕ್ರಾಪ್ ಕಟಿಂಗ್ ಎಕ್ಸ್‌ಪರಿಮೆಂಟ್ ಮಾಡಿ ದ್ದಾರೆಯೇ ? ಮಾಡಿದ್ದರೆ ಯಾವ ಯಾವ ಭಾಗದಲ್ಲಿ ಎಷ್ಟೆಷ್ಟು ಬೆಳೆಯಾಗಿದೆ ಎಂದು ಗೊತ್ತಾಗಿದೆ ಸ್ವಾಮಿ?

ಶ್ರೀ ಬಿ. ರಾಚಯ್ಯ.—ಎಲ್ಲ ತಾಲ್ಲೂಕುಗಳಲ್ಲಿ, ಎಲ್ಲ ಗ್ರಾಮಗಳಲ್ಲಿ ಆಗಿರುವುದನ್ನು ಹೇಳುವುದು ಕಷ್ಟವಾಗುತ್ತದೆ. ಕ್ರಾಪ್ ಕಟಿಂಗ್ ಎಕ್ಸ್‌ಪರಿಮೆಂಟ್ ಕೆಲವು ಕಡೆ ಮಾಡಿದ್ದಾರೆ. ಮಾಡದೆ ಇರುವ ಕಡೆ ಪಹಣಿಯಲ್ಲಿ ಏನು ಬರೆದಿರುತ್ತಾರೆ ಅದರ ಪ್ರಕಾರ ರಿಯಾಯಿತಿ ಕೊಡಬೇಕು ಎಂದು ಮಾಡಿದೆ.

Sri H. SIDDAVEERAPPA.—In how many Taluks in the State, scarcity conditions are prevailing? What is the percentage of the area affected by these scarcity conditions?

Sri B. RACHAIAH.—About 13 Districts. In Bangalore District, parts of Anekal, Channapatna, Hoskote, Nelamangla, Kanakapura, Ramanagara, Magadi, Doddaballapura. And some parts in Bangalore South and North Taluks. In Kolar District, Kolar, Malur, Bangarpet, Chintamani, Chickballapur, Gowribidnur, Bagepalli, Gudibanda, Srinivaspur, Sidlaghatta and Mulbagal Taluks. In Tumkur District, Chiknaikanahalli, Tiptur, Pavagada, Kortagere, Madhugiri, Sira, Kunigal, Gubbi, Tumkur and Turuvekere. In Chitradurga District, Chitradurga, Challakere, Hiriyur, Molakalmuru and Jagalur Taluks.

Sri H. SIDDAVEERAPPA.—Does it not mean that three-fifths of the State has been affected and when such is the magnitude of the problem, do the Government genuinely believe that the steps that have been taken are sufficient to mitigate the hardships of the people?

Sri B. RACHAIAH.—As I have already stated, 13 Districts, out of 19 Districts, have been affected with bad conditions; and whatever amounts we have placed at the disposal of the respective Officers they have not been spent. We feel that till we get the next crop, these scarcity conditions may go on. Further, we have requested the Government of India to help us in a big way and in response, they are sending

(Sri B. Rachaiah)

a team of Officers to go round the affected areas and to point out to the Government of India the necessity of additional grants by the Government of India to the State Government.

Sri H. SIDDAVEERAPPA.—Does it not mean that your administrative machinery is either unwilling to tackle this problem or is incapable of tackling this problem ? Otherwise, the amounts that the Government have allotted could have been spent within a fortnight. Such is the magnitude of the offence of the Officers.

Sri B. RACHAIAH.—Directions have been issued to all the Deputy Commissioners to spend this amount by March 31st, and if there is any spillover, they may ask for additional grants till the scarcity conditions are effectively met.

ಶ್ರೀ ಪಿ. ಎನ್. ಪಾಟೀಲ್.—ಪಹಣಿ ಬರೆದಿರುವ ಆಧಾರದ ಮೇಲೆ ಎಷ್ಟೆಷ್ಟು ಬೆಳೆ ಆಗಿದೆ ಎಂದು ನೋಡಿಕೊಂಡು ಅದರ ಪ್ರಕಾರ ರಿಮಿಷನ್ ಕೊಡಲಾಗುತ್ತದೆಂದು ಹೇಳಿದರು. ಪಹಣಿಯನ್ನು ಜುಲೈ ಮತ್ತು ಡಿಸೆಂಬರ್ ತಿಂಗಳಿನಲ್ಲಿ ಬರೆಯುತ್ತಾರೆ. ಗುಲ್ಬರ್ಗ ವಿಭಾಗದಲ್ಲಿ ಅನೆಕಲ್ಲು ಬಿದ್ದು ಕೆಲವು ತಾಲ್ಲೂಕುಗಳಲ್ಲಿ ನಾರ್ಮಾಲ್ ಬೆಳೆ ಕೂಡ ಆಗಿಲ್ಲ. ಈ ಭಾಗದ ಜನರಿಗೆ ಏನು ಪರಿಹಾರ ಕೊಡುತ್ತೀರಿ ? ಲೆವಿ ವಸೂಲಿಯನ್ನು ಸಸ್ಪೆಂಡ್ ಮಾಡಿದ್ದೀರಾ ?

ಶ್ರೀ ಬಿ. ರಾಚಯ್ಯ.—ಆ ಭಾಗದಲ್ಲಿ ಹೆಚ್ಚಾಗಿ ಮಳೆ ಬಿದ್ದು ಗುಲ್ಬರ್ಗ ಜಿಲ್ಲೆಯ ಚಿಂಚೋಳಿ ತಾಲ್ಲೂಕು ಮತ್ತು ಬೀದರ ಜಿಲ್ಲೆಯ ಕೆಲವು ತಾಲ್ಲೂಕುಗಳಲ್ಲಿ ಸ್ಯಾಂಡಿಂಗ್ ಕ್ರಾಪ್ ಕೆಟ್ಟು ಹೋಗಿದೆ. ಅಂಥ ಕಡೆ ಕೆಲವು ಕಡೆಗಳು ಕೂಡ ನತ್ತಿವೆ ಎಂದು ಹಿಂದಿನ ಸಾರಿ ಒಂದು ಪ್ರಶ್ನೆಗೆ ಉತ್ತರ ಹೇಳಿದ್ದೇನೆ. ರೈತರಿಗೆ ಪರಿಹಾರ ಕೊಡತಕ್ಕದ್ದು ಮತ್ತು ಕಂದಾಯ ವಸೂಲ್ಮಾಡುವುದನ್ನು ಮುಂದೂಡುವುದು ಈ ಬಗ್ಗೆ ಪ್ರಶ್ನೆ ಬಂದಾಗ ಉತ್ತರ ಕೊಟ್ಟಿದ್ದೇನೆ. ಎಲ್ಲೆಲ್ಲಿ ಪರಿಹಾರವನ್ನು ಕೊಡಬೇಕೋ ಅಲ್ಲಿ ಅದನ್ನು ತಪ್ಪ ಮಾಡದೆ ಕೊಡುವುದಕ್ಕೆ ಪ್ರಯತ್ನ ಮಾಡಿದ್ದೇವೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಕುಣಿಗಲು ತಾಲ್ಲೂಕು ಮಾಕೋನಹಳ್ಳಿ ಜರಾತಿಯಿಂದ ಹಿಂದೆ 15 ಸಾವಿರ ಎಕರೆ ಸ್ಯಾಂಡಿಂಗ್ ಕ್ರಾಪ್ ಅಷ್ಯೂರ್ಡ್ ವಾಟರ್ ಸಪ್ಲೈ ಇದ್ದ ಕಡೆ ಮೂರು ಬೆಳೆ ನಷ್ಟವಾಗಿದೆ ಅವ್ರಿಗೆ ಕೊಟ್ಟಿರುವ ಪರಿಹಾರವೇನು ? ಅಂಥ ಕಡೆ ಕ್ರಾಪ್ ಇನ್‌ಷೂರೆನ್ಸ್ ಸ್ಕೀಂ ಜಾರಿಗೆ ತರುವ ವಿಚಾರವನ್ನು ಪರಿಶೀಲಿಸುತ್ತೀರಾ?

ಶ್ರೀ ಬಿ. ರಾಚಯ್ಯ.—ಮೂರು ಬೆಳೆ ಹೋಗಿದೆಯೆಂಬುದು ನನಗೆ ಗೊತ್ತಿಲ್ಲ. ಕ್ರಾಪ್ ಇನ್‌ಷೂರೆನ್ಸ್ ಸ್ಕೀಂ ಜಾರಿಗೆ ತರುವುದು ಬಹಳ ದೊಡ್ಡ ಸಮಸ್ಯೆ ಅದನ್ನು ಇನ್ನುಮೇಲೆ ಮಾಡಬೇಕಾದೀತೇನೋ.

ಶ್ರೀ ಕೆ. ಎಚ್. ತಮ್ಮಯ್ಯ.—ಈಗ ಕೊಟ್ಟಿರುವ ಹಣವನ್ನು ಮಾರ್ಚಿ ತಿಂಗಳೊಳಗಾಗಿ ಖರ್ಚುಮಾಡಲು ಸಾಧ್ಯವಾಗುವುದಿಲ್ಲವಾದ್ದರಿಂದ ಅದಕ್ಕೆ ಕಾಲಾವಕಾಶ ಕೊಡುವುದ ಕ್ಕಾಗುತ್ತದೆಯೇ?

ಶ್ರೀ ಬಿ. ರಾಚಯ್ಯ.—ಈಗ ಒಂದೊಂದು ಜಿಲ್ಲೆಗೆ 3—4 ಲಕ್ಷ ರೂಪಾಯಿಗಳನ್ನು ಕೊಡಲಾಗಿರುವುದನ್ನು 10 ತಾಲ್ಲೂಕುಗಳಿಗೆ ಹಂಚಿದರೆ ಬಹುಶಃ ಅದನ್ನು 15 ದಿವಸಗಳಲ್ಲಿ ಖರ್ಚುಮಾಡಬಹುದು, ಅದಕ್ಕೆ ಅವಕಾಶವಿದೆ. ಆದುದರಿಂದ ಖರ್ಚಾಗುವುದಿಲ್ಲ ಎಂದು ಹಾಗೆ ಮಾನ್ಯ ಸದಸ್ಯರು ಕೇಳಿರಬಹುದು.

ಶ್ರೀ ಪಿ. ವೆಂಕಟಗಿರಿಯಪ್ಪ.—ಸರಕಾರ ಖರ್ಚುಮಾಡುತ್ತಿರುವ ಹಣ ಜನರಿಗೆ ಸೇರುತ್ತಿಲ್ಲ. ಅದು ಮಧ್ಯವರ್ತಿಗಳಿಗೆ ದಳ್ಳಾಳಿಗಳಿಗೆ ಸೇರುತ್ತಿವೆ. ಆದುದರಿಂದ ಅದನ್ನು ತಪ್ಪಿಸಲು ಜನರಿಗೆ ಸೇರುವಂತೆ ಮಾಡಲು ಮಂತ್ರಿಗಳು ಅನಿರೀಕ್ಷಿತ ಭೇಟಿ ಕೊಡುವ ಯೋಜನೆ ಇದೆಯೇ ?

ಶ್ರೀ ಬಿ. ರಾಚಯ್ಯ.—ಇದುವರೆಗೆ ಮಧ್ಯವರ್ತಿ ಜನರಿಗೆ ಸೇರಿದೆಯೆಂದು ಯಾವ ವಿಧವಾದ ಪುಕಾರೂ ಬಂದಿಲ್ಲ, ಮಾನ್ಯ ಸದಸ್ಯರು ಈಗ ಹೇಳುತ್ತಿದ್ದಾರೆ, ಇನ್ನುಮೇಲೆ ನೋಡುತ್ತೇನೆ.